ಹಾಗೂ ಆತನಿಗೆ ರಂಗಮ್ಮನ ವಿಚಾರ ಗೊತ್ತಿದೆ, ಆದರೆ ಹೇಳುತ್ತಿಲ್ಲ ಎಂದು ಬಲವಾಗಿ ಅನ್ನಿಸಿತು. ಇಷ್ಟೆಲ್ಲಾ ಆದಮೇಲೆ ಏನಾದರೊಂದು ತೀರ್ಮಾನ ಆಗಲೇಬೇಕೆಂದು ಕೇಶವ ಆತನ ಕೈಹಿಡಿದು 'ನಿಮ್ಮತ್ರ ಮಾತಾಡ್ಬೇಕು' ಅಂದ. ಆದರೆ ಅವನು ಕೇಶವನನ್ನು ಕಾರಿನವರೆಗೂ ಕರೆತಂದು, 'ಅವಳಿಂದ ನಾವು ಈಗ ಅನುಬವುಸ್ತಾ ಇರೋದೆ ಸಾಕು, ನೀವು ಹೊರಡಿ, ಅನ್ಯಾಯವಾಗಿ ನೀವ್ಯಾಕೆ ಹೊಡ್ತ ತಿಂತೀರ' ಅಂತ ಹೇಳಿ ಹೊರಡಲುವಾದ. ಅವನ ರಟ್ಟೆ ಹಿಡಿದ ಕೇಶವ 'ನಿಮ್ಗೆ ಆಕೆ ಬಗ್ಗೆ ಗೊತ್ತಿದೆ, ನಿಜ ಹೇಳಿ, ನಾನ್ ಬಂದಿರೋದು ಯಾಕೇಂತ ನಿಮಗ್ಗೊತ್ತಾ' ಎಂದು ಸಿಟ್ಟಿನಿಂದಲೇ ಕೇಳಿದ. ಇವರಿಬ್ಬರೂ ಜಗಳವಾಡುತ್ತಿದ್ದಾರೆ ಅಂತ ಜನ ಮತ್ತಷ್ಟು ಹೆಚ್ಚಾದರು. ಬಾಗಿಲು ತೆಗೆದು ಕಾರಿನೊಳಗೆ ಕೂರಿಸಿ, 'ಅವ್ಳು ಮದ್ವೆಗೆ ಮುಂಚೆನೆ ಬಸಿರಾಗಿದ್ಲು, ಯಾರೋ ಮಾದಿರುಡ್ಗ ಅಂತೆ. ಅದು ಗೊತ್ತಾಗಿ ಅಮ್ಮ ಚೆನ್ನಾಗಿ ಹೊಡಿತು, ಆವತ್ ಮನೆ ಬಿಟ್ಟು ಹೋದೋಳು, ಊರಲ್ಲಿ ತಲೆ ಎತ್ಕೊಂಡು ಓಡಾಡದಂಗೆ ಮಾಡ್ಬುಟ್ಳಲ್ಲ ಅಂತ ನಾವೂನು ಹುಡುಕಾಕೆ ಹೋಗ್ಲಿಲ್ಲ' ಎಂದು ಅವನು ಹೇಳುತ್ತಿರುವಾಗಲೇ ಕೇಶವ ಕಾರು ಚಲಾಯಿಸಿದ. ಅಸಹ್ಯವನ್ನು ತುಳಿದ ಅನುಭವವಾಯಿತು. ಕ್ಯಾಕರಿಸಿ ಬೀದಿಗೆ ಉಗಿದ.

ಒಂದು ವಾರ ಮನೆ ಬಿಟ್ಟು ಕದಲಲಿಲ್ಲ. ಹೆಚ್ಚಿಗೆ ಮಾತೂ ಇಲ್ಲ. ಮಡದಿಗೆ ಎಲ್ಲಾ ಹೇಳಿದ್ದ. ಐಡಿ ಹಳ್ಳಿ ಘಟನೆ ಬಗ್ಗೆ ಓಬಳೇಶನಿಗೆ ತಿಳಿಸಲಿಲ್ಲ. ಫೋನಿನಲ್ಲಿ ಹೆಚ್ಚು ಮಾತಾಡಬಾರದೆಂದು ಸ್ವಾಮೀಜಿ ತಾಕೀತು ಮಾಡಿದ್ದರು. ಇಷ್ಟೆಲ್ಲಾ ಓಡಾಡಿದ ನಂತರವೂ ರಂಗಮ್ಮನ ಜಾಡು ಸಿಕ್ಕಿರಲಿಲ್ಲ. ಮನೆಯಲ್ಲಿ ರಂಪಾಟವಾಗಿದ್ದರಿಂದ ಹೊರಟುಹೋಗಿದ್ದಳು. ಇದೆಲ್ಲಾ ಮೊದಲ ಎರಡು ವರ್ಷದಲ್ಲಿ ನಡೆದಿದ್ದು. ನಂತರ ಎಲ್ಲಿ ಹೋದಳು?

ಯೋಚಿಸುತ್ತಾ ಮಲಗಿದ್ದವನು ಏನೋ ನೆನಪಿಸಿಕೊಂಡವನಂತೆ ಮನೆಯಿಂದ ಹೊರಟ. ಸೀದಾ ದೊಡ್ಡಬಳ್ಳಾಪುರದ ಬಿ.ಇ.ಒ. ಕಚೇರಿಗೆ. ಒಂದು ಗಂಟೆ ಹುಡುಕಿದ ನಂತರ ರಂಗಮ್ಮ ಕೊಪ್ಪಳ ಜಿಲ್ಲೆಯ ಮುನಿರಾಬಾದಿಗೆ ಪನಿಶ್‌ಮೆಂಟ್ ವರ್ಗಾವಣೆಯಾಗಿದ್ದ ಮಾಹಿತಿ ಸಿಕ್ಕಿತ್ತು. ಅಂದರೆ ಮೊದಲ ಎರಡು ವರ್ಷ ಮಧುಗಿರಿ ಸುತ್ತಮುತ್ತಲ ತಾಲ್ಲೂಕುಗಳಲ್ಲೇ ಇದ್ದ ಆಕೆ ಪರಿಚಿತರಿಂದ ಪಾರಾದರೆ ಸಾಕೆಂದು ದೂರದ ಉತ್ತರ ಕರ್ನಾಟಕಕ್ಕೆ ಹೋಗಿದ್ದಾಳೆ.

ಮುನಿರಾಬಾದ್ ಶಾಲೆಯ ನಂಬರ್ ಪತ್ತೆ ಹಚ್ಚಿ ಕರೆ ಮಾಡಿದ. ರಂಗನಾಯಕಮ್ಮ ಹೆಸರಿನವರು ಯಾರೂ ಅಲ್ಲಿ ಕೆಲಸ ಮಾಡಿಲ್ಲವೆಂಬ ಉತ್ತರ. ತಲೆ ಗಿರ್ರೆಂದಿತು. ಏನೋ ದಾರಿ ಸಿಕ್ಕಿತು ಎಂದುಕೊಳ್ಳುವಷ್ಟರಲ್ಲಿ ಅದು ಮುಚ್ಚಿಹೋಗುತ್ತಿತ್ತು. ಸೀದಾ ಮುನಿರಾಬಾದಿಗೇ ಹೋದ. ಅಲ್ಲಿನ ಶಾಲೆಯಲ್ಲಿ ಎಷ್ಟು ಕಡತಗಳನ್ನು ತಡಕಿದರೂ ಕಳೆದ ಹದಿನೈದು ವರ್ಷಗಳಲ್ಲಿ ರಂಗನಾಯಕಮ್ಮ ಹೆಸರಿನ ಯಾರೂ ಕೆಲಸ ನಿರ್ವಹಿಸಿದ ದಾಖಲೆಗಳಿರಲಿಲ್ಲ. ಆದರೆ ಕಮಲಮ್ಮ ಎಂಬುವರ ಹೆಸರಿತ್ತು. ರಂಗನಾಯಕಮ್ಮ ಅಲ್ಲಿ ವರ್ಗಾವಣೆ ಆದೇಶ ಪಡೆದ ಹತ್ತು ದಿನಗಳ ನಂತರ ಇಲ್ಲಿ ಕಮಲಮ್ಮ ಕರ್ತವ್ಯಕ್ಕೆ ಹಾಜರಾಗಿದ್ದರು. ಮೂರು ವರ್ಷ ಕೆಲಸ ಮಾಡಿ ಬೆಂಡವಾಡ ಎಂಬ ಊರಿಗೆ ವರ್ಗವಾಗಿ ಹೋಗಿದ್ದರು. ಅದಾದರೋ ಬೆಳಗಾವಿ ಜಿಲ್ಲೆಯ ರಾಯಬಾಗದಲ್ಲಿತ್ತು.

ಹೆಸರನ್ನೇನಾದರೂ ಬದಲಾಯಿಸಿಕೊಂಡಳಾ? ಅಥವಾ ಮನೆಯಲ್ಲಿ ಆದ ಗಲಾಟೆಗೆ ಬೇಸತ್ತು ಜೀವಕ್ಕೇನಾದರೂ ಅಪಾಯ ತಂದುಕೊಂಡಳಾ? ಆ ಆಲೋಚನೆ ಬಂದಿದ್ದೇ ತಡ ಕೇಶವನ ಕಣ್ಣಲ್ಲಿ ನೀರು ತುಳುಕಿತು. ತುಂಗಭದ್ರಾ ಜಲಾಶಯದ ಎದುರಿಗೆ ಸುಮ್ಮನೇ ಕುಳಿತ. ಸಮಸ್ಯೆ ಈಗ ಎರಡು ಕವಲಾಗಿತ್ತು. ಕಮಲಮ್ಮನ ಜಾಡು ಹಿಡಿದು ಹೋಗುವುದೋ, ರಂಗನಾಯಕಮ್ಮನ ಜಾಡು ಹಿಡಿಯುವುದೋ ಎಂಬ ಗೊಂದಲ. ಏನೋ ಹೊಳೆದಂತಾಗಿ ಕಮಲಮ್ಮ ಮುನಿರಾಬಾದಿನಲ್ಲಿ ವಾಸವಾಗಿದ್ದ ಮನೆ ಹುಡುಕಿ ಹೊರಟ. ಶಾಲೆಯ ಜವಾನನ ಸಹಕಾರದಿಂದ ಆ ಮನೆ ಸಿಕ್ಕಿತು.

'ಕಮಲಮ್ಮ ಅಂತ ಟೀಚರ್ರು ನಿಮ್ಮನೇಲಿ ಇದ್ರಾ?'

'ಇದ್ದರ್ರಿ.'

'ಅವರು ಯಾವ ಊರಿನಿಂದ ಬಂದಿದ್ರು ಗೊತ್ತಾ?'

'ಗೊತ್ತಿಲ್ರಿ, ಇದೇ ಊರಾಗ ಬ್ಯಾರೆ ಮನ್ಯಾಗ ಇದ್ದು, ಅಲ್ಲಿಂದ ಇಲ್ಲಿಗ ಬಂದಿದ್ರು.'

'ಅವರ ಜೊತೆ ಮಗು ಏನಾದ್ರೂ ಇತ್ತಾ?'

'ಇತ್ತಲ್ರಿ.' ಕೇಶವನ ಉಸಿರು ಜೋರಾಯಿತು. ಕೈ ನಡುಗತೊಡಗಿತು.

'ಗಂಡ, ಅಂದ್ರೆ ಯಜಮಾನ್ರು.'

'ಗಂಡ ಇದ್ದಿಲ್ರಿ, ಒಬ್ಬಾಕಿನೇ ಇದ್ದರ್ರಿ.'

ಇದೇ ಕೊನೆ ಹುಡುಕಾಟ ಎಂದುಕೊಂಡು ಬಸ್ಸು ಹತ್ತಿದ. ಇಡೀ ರಾತ್ರಿ ಪ್ರಯಾಣ. ಮುನಿರಾಬಾದಿನಿಂದ ಮೂರು ಬಸ್ಸು ಹತ್ತಿ ಇಳಿದು ಬೆಂಡವಾಡ ತಲುಪಿದಾಗ ಸಂಜೆ ನಾಲ್ಕು ಗಂಟೆ. ಬೆಂಡವಾಡ ಸಣ್ಣ ಹಳ್ಳಿ. ಶಾಲೆ ಹುಡುಕುವುದು ಕಷ್ಟವಾಗಲಿಲ್ಲ. ಗೇಟು ದಾಟುವಾಗ ಎಷ್ಟು ನಿಯಂತ್ರಿಸಿಕೊಂಡರೂ ಕೇಶವನ ಎದೆಬಡಿತ ಹೆಚ್ಚಾಯಿತು. ಆದರೆ ಶಾಲೆಯಲ್ಲಿ ಕಮಲಮ್ಮ ಇರಲಿಲ್ಲ. ಯಾವುದೋ ಸರ್ವೆ ಮಾಡಲು ಪಕ್ಕದ ಹಳ್ಳಿಗೆ ಹೋಗಿದ್ದಾರೆಂದು ತಿಳಿಯಿತು. ತುಸು ನಿರಾಳವಾದ. ಮನೆ ತೋರಿಸಲು ಮಾಸ್ತರು ಇಬ್ಬರು ಮಕ್ಕಳನ್ನು ಕಳಿಸಿದರು. ಅವರು ಮುಂದೆ, ಈತ ಹಿಂದೆ. ಕಾಲುದಾರಿಯಲ್ಲಿ ನಡೆಯುತ್ತಿದ್ದರು. ಕೇಶವನ ಮನಸ್ಸಿನಲ್ಲಿ ಆಸೆಗಳು ಮೂಡತೊಡಗಿದವು.

'ಇದಾ ನೋಡ್ರೀ ಮನಿ.'

'ಟೀಚರ್ ಇದಾರ ಸ್ವಲ್ಪ ನೋಡಿ.'

'ಇದಾರೋ ಏನ್ ಇಲ್ಲೋ ಯಾಂಬಲ್ರಿ.' ಎಂದು ಹೇಳಿ ನಗುತ್ತಾ ಆ ಮಕ್ಕಳು ಹೋಗಿಬಿಟ್ಟವು.

ಪುಟ್ಟ ಮನೆ. ಬಾಗಿಲಿಗೆ ಬೀಗ ಹಾಕಿರಲಿಲ್ಲ. ನೂಕಿದ. ತೆರೆದುಕೊಂಡಿತು. ಒಳಗೆ ಕಾಲಿಟ್ಟು ತಲೆ ಎತ್ತಿದವನಿಗೆ ಆಘಾತ. ಷಣ್ಮುಖಾನಂದ ಸ್ವಾಮೀಜಿಯ ದೊಡ್ಡ ಫೋಟೋ. ಅದಕ್ಕೆ ಮಲ್ಲಿಗೆ ಹೂವಿನ ಹಾರ. ಗೋಡೆಗೆ ಒರಗಿ ಹಾಗೇ ಕುಳಿತ.

ಅತ್ತ, ಸರ್ವೆ ಮುಗಿಸಿ ಶಾಲೆಗೆ ಹೋದ ಕಮಲಮ್ಮನಿಗೆ ನಿಮ್ಮನ್ನು ಕೇಳಿಕೊಂಡು ಯಾರೋ ಬಂದಿದ್ದಾರೆ ಎಂದು ಮಾಸ್ತರು ಹೇಳಿದಾಗ ಆಶ್ಚರ್ಯ. ಇಷ್ಟು ವರ್ಷಗಳ ನಂತರ ನನ್ನನ್ನು ಹುಡುಕಿಕೊಂಡು ಯಾರು ಬರುತ್ತಾರೆ ಎಂದುಕೊಂಡು ಮನೆಯತ್ತ ನಡೆದಳು. ಓಡಿದಳೆಂದರೂ ಸರಿಯೇ. ಅವಳ ಅನುಮಾನ ನಿಜವಾಗಿತ್ತು. ಅಂಗಳಕ್ಕೆ ಕಾಲಿಕ್ಕುತ್ತಿದ್ದಂತೆಯೇ ಗುರುತು ಸಿಕ್ಕಿಬಿಟ್ಟಿತು. 'ಕೇಶ್ವಣ್ಣಾ' ಎನ್ನುತ್ತಾ ಬಿದ್ದೇಬಿಟ್ಟಳು.

ಇಬ್ಬರೂ ಒಂದೇ ಸಮ ಅಳುತ್ತಿದ್ದರು. ಅಳುವೇ ಅವರ ನಡುವೆ ಸಂವಹನ ನಡೆಸುತ್ತಿತ್ತು. ಮಗಳು ಶಾಲೆಯಿಂದ ಬಂದ ನಂತರವೇ ಅವರು ಮಾಮೂಲಿನ ಸ್ಥಿತಿಗೆ ಬಂದಿದ್ದು.

ರಾತ್ರಿ ಮಗಳು ಮಲಗಿದ ಬಳಿಕ ರಂಗಮ್ಮ ತಾನು ಕಮಲಳಾಗಿ ಬದಲಾದ ಕಾರಣಗಳನ್ನು ಬಿಚ್ಚಿಟ್ಟಳು. ಆವತ್ತು ಕಾಲೇಜಿನ ಬಳಿ ಮಾತನಾಡಿದ ಒಂದು ತಿಂಗಳಿಗೆಲ್ಲಾ ಆಕೆಗೆ ಓಬಳಿ ಸ್ವಾಮೀಜಿಯಾದ ವಿಷಯ ಪತ್ರಿಕೆಗಳಿಂದ ತಿಳಿಯಿತು. ದಿಕ್ಕೇ ತೋಚದೆ ಹುಚ್ಚಿಯಂತಾಗಿದ್ದಳು. ಮನೆಯವರಿಗೆ, ಊರವರಿಗೆ, ಶಾಲೆಗೆಲ್ಲಾ ವಿಷಯ ಗೊತ್ತಾಯಿತು. ಗರ್ಭಪಾತಕ್ಕೆ ಮನಸ್ಸಾಗಲಿಲ್ಲ. ಎಲ್ಲ ಕಡೆಯಿಂದಲೂ ಮೂದಲಿಕೆ. ಪದೇಪದೇ ಶಾಲೆ ಬದಲಾವಣೆ. ಮನೆಯಿಂದಲೂ ಹೊರಹಾಕಿದ ಮೇಲೆ ಗಟ್ಟಿ ಮನಸ್ಸು ಮಾಡಿ ಹೆಸರು ಬದಲಿಸಿಕೊಂಡು ದೂರದ ಮುನಿರಾಬಾದ್ ಸೇರಿ, ನಂತರ ಬೆಂಡವಾಡಕ್ಕೆ ಬಂದಿದ್ದಳು.

ಎಷ್ಟೋ ವರ್ಷಗಳ ನಂತರ ಭೇಟಿಯಾಗಿದ್ದರಿಂದ ಇಬ್ಬರೂ ತಮ್ಮ ಕಳೆದುಹೋದ ದಿನಗಳ ಬಗ್ಗೆಯೇ ಮಾತನಾಡಿದ್ದರು. ಅಸಲು ವಿಷಯವನ್ನು ಹೇಳಲು ಕೇಶವನೂ ಮರೆತಿದ್ದ, ಕೇಳಲು ರಂಗಮ್ಮನೂ ಮರೆತಿದ್ದಳು. ತಾನು ಹೇಳುವ ವಿಷಯ ಕೇಳಿ ರಂಗಮ್ಮ ಅತೀವ ಸಂತೋಷಪಡುತ್ತಾಳೆಂಬ ಆತ್ಮವಿಶ್ವಾಸ ಅವನಲ್ಲಿತ್ತು.

'ಓಬಳೇಶ್ ಸಿಕ್ಕಿದ್ರು.'

'ಹೌದಾ, ಯಾವಾಗ?'

'ತಿಂಗಳಾಯ್ತು, ಮೈಸೂರಲ್ಲಿ.'

ರಂಗಮ್ಮ ಮಾತಾಡಲಿಲ್ಲ.

'ನಿನಗೆ ಮತ್ತೆ ಜಾಲಾರಿ ಹೂ ಕೊಡೋಕೆ ತಯಾರಾಗಿದ್ದಾರೆ.'

ಅವನು ಆ ವಿಚಾರ ಪ್ರಸ್ತಾಪಿಸಿದಾಗ ತಡರಾತ್ರಿ ಮೀರುತ್ತಿತ್ತು.

* * *

ಮರುದಿನ ಬೆಳಿಗ್ಗೆ.

ಬಂದ ಕಾಲುದಾರಿಗುಂಟ ಕೇಶವ ನಡೆಯುತ್ತಿದ್ದ.

ಒಬ್ಬನೇ.

ರಾತ್ರಿಯಿಡೀ ಪ್ರಯತ್ನಿಸಿದರೂ ಆಕೆ ಷಣ್ಮುಖಾನಂದ ಸ್ವಾಮೀಜಿಯೊಂದಿಗೆ ಬಾಳುವೆ ಮಾಡಲು ಒಪ್ಪಲೇ ಇಲ್ಲ. ತಾನು ಮತ್ತೆ ರಂಗನಾಯಕಮ್ಮನಾಗುವುದು, ಅವನು ಮತ್ತೆ ಓಬಳೇಶನಾಗುವುದು ಸಾಧ್ಯವೇ ಇಲ್ಲವೆಂದು ಕಡ್ಡಿ ಮುರಿದಂತೆ ಹೇಳಿಬಿಟ್ಟಳು.

ಪ್ರತಿಕ್ರಿಯಿಸಿ: feedback@sudha.co.in